**ವಾಣಿಜ್ಯ, ಲೈಂಗಿಕ ಶೋಷಣೆಗಾಗಿ ಸಾಗಾಣಿಕೆಗೆ ಒಳಪಟ್ಟ ಮಕ್ಕಳನ್ನು ರಕ್ಷಿಸುವ ಸಲುವಾಗಿ ರಕ್ಷಣಾಪೂರ್ವ, ರಕ್ಷಣಾ ಸಮಯ ಹಾಗೂ ರಕ್ಷಣಾ ನಂತರದ ಕಾರ್ಯಾಚರಣೆ ಕುರಿತು ಶಿಷ್ಟಾಚಾರ.**

I. ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿ.

II. ರಕ್ಷಣಾ ತಂಡದ ಸದಸ್ಯರಿಗೆ

ರಕ್ಷಣಾ ತಂಡದ ಸದಸ್ಯರಿಗೆ:
ಅ) ರಕ್ಷಣಾಪೂರ್ವ ಕಾರ್ಯಾಚರಣೆ
ಆ) ರಕ್ಷಣಾ ಸಮಯದ ಕಾರ್ಯಾಚರಣೆ
ಇ) ರಕ್ಷಣಾ ನಂತರದ ಕಾರ್ಯಾಚರಣೆ
ಈ) ಪುನರ್ ವಸತಿ ಕುರಿತು ಕಾರ್ಯತಂತ್ರ

## I. ರಾಜ್ಯ ಸರ್ಕಾರಗಳಿಗೆ ಮಾರ್ಗಸೂಚಿ.

i. ಸಾಗಾಣಿಕೆ ವಿರುದ್ಧ ಕಾರ್ಯನೀತಿಯನ್ನು ತಯಾರಿಸಿ ಅದರಲ್ಲಿ ಸಾಗಾಣಿಕೆಗೆ ತುತ್ತಾದವರ ಪರ ಅವಕಾಶಗಳನ್ನು ಹಾಗೂ ಸೂಕ್ತ ರಚನೆಗಳನ್ನು ನಿರ್ದಿಷ್ಟಪಡಿಸುವುದು.

ii. ವಾಣಿಜ್ಯ ಲೈಂಗಿಕ ಶೋಷಣೆಗೆ ತುತ್ತಾದ ಮಕ್ಕಳಿಗೆ ವಿಶೇಷವಾಗಿ ರಕ್ಷಣೆ ಮತ್ತು ಪುನರ್ ವಸತಿ ಕಲ್ಪಿಸುವ ಸಲುವಾಗಿ ಹಾಗೂ ಸಾಗಾಣಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಂಬಂಧಪಟ್ಟ ಇತರ ಇಲಾಖೆಗಳೊಂದಿಗೆ ಸಮನ್ವಯಗೊಳಿಸುವ ಸಲುವಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಾಗಾಣಿಕೆ ವಿರುದ್ಧ ಕೋಶಗಳನ್ನು ಸೃಜಿಸುವುದು.

iii. ಸಾಗಾಣಿಕೆದಾರರು, ವೇಶ್ಯಾ ಗೃಹಗಳ ಮಾಲೀಕರು, ಮಾಹಿತಿ ಒದಗಿಸುವವರು, ನಕಲಿ ಗಿರಾಕಿಗಳು, ದಾಖಲಾದ ಪ್ರಕರಣಗಳ ಸಂಖ್ಯೆ, ಪ್ರತಿ ಪ್ರಕರಣದ ಸ್ಥಾನಮಾನ, ರಾಜ್ಯ/ಜಿಲ್ಲೆಗಳಲ್ಲಿ ಮೂಲ ಹಾಗೂ ಗಮ್ಯ ಪ್ರದೇಶಗಳು ಹಾಗೂ ಇನ್ನಿತರ ಸಂಬಂಧಿಸಿದ ಮಾಹಿತಿಗಳ ಬಗ್ಗೆ ಡೇಟಾ ಬೇಸ್ ತಯಾರಿಸುವುದು ಹಾಗೂ ಡೇಟಾ ಬೇಸ್‌ನ ಮಾಹಿತಿಯನ್ನು ಗೌಪ್ಯವಾಗಿಟ್ಟು, ಸದುದ್ದೇಶಕ್ಕಾಗಿ ಮಾಹಿತಿ ಕೋರುವವರಿಗೆ ಮಾತ್ರ ನೀಡಬೇಕು.

iv. ಸಮುದಾಯ ಮಟ್ಟದಲ್ಲಿ ಸಮುದಾಯ ಕಾವಲು ಗುಂಪುಗಳನ್ನು ರಚಿಸುವುದು. ಸದರಿ ಗುಂಪುಗಳು ಸಾಗಾಣಿಕೆಗೆ ಒಳಪಟ್ಟವರನ್ನು ರಕ್ಷಿಸಲು ಸಮುದಾಯ ಮಟ್ಟದಲ್ಲಿಯೇ ನೆರವಾಗುವುದು.

v. ರಕ್ಷಣಾ ಕಾರ್ಯಾಚರಣೆಗೆ ಸಾಕಷ್ಟು ಪೋಲೀಸ್ ಸಿಬ್ಬಂದಿಯನ್ನು ಅದರಲ್ಲೂ ವಿಶೇಷವಾಗಿ ಮಹಿಳಾ ಪೋಲೀಸ್ ಸಿಬ್ಬಂದಿಯನ್ನು ನೇಮಿಸುವುದು.

vi. ಜನರಿಗೆ ಸಾಗಾಣಿಕೆ ವಿರುದ್ಧ ಎಚ್ಚರಿಸಲು ಹಾಗೂ ಮಕ್ಕಳನ್ನು ವಾಣಿಜ್ಯ ಲೈಂಗಿಕ ಶೋಷಣೆಗೆ ಬಳಸುತ್ತಿರುವ ಬಗ್ಗೆ ಮುನ್ಸೂಚನೆ ನೀಡುವ ಸಲುವಾಗಿ ಸೂಚನಾ ಫಲಕಗಳನ್ನು ಹೋಟೆಲ್, ಪ್ರವಾಸ ಸ್ಥಳಗಳು, ಸಮುದ್ರ ತೀರ, ವಿಮಾನ ನಿಲ್ದಾಣ, ಬಸ್ ನಿಲ್ದಾಣ, ರೈಲು ನಿಲ್ದಾಣ ಹಾಗೂ ಇನ್ನಿತರ ಸೂಕ್ಷ್ಮ ಸ್ಥಳಗಳಲ್ಲಿ ಪ್ರಮುಖವಾಗಿ ಕಾಣುವಂತೆ ಪ್ರದರ್ಶಿಸುವುದು. ಒಂದು ವೇಳೆ ಯಾವುದೇ ಮಗು ಈ ಸ್ಥಳಗಳಲ್ಲಿ ಸಂಶಯಾಸ್ಪದ ಪರಿಸ್ಥಿತಿಯಲ್ಲಿ ಕಂಡುಬಂದಲ್ಲಿ ಮಾಹಿತಿದಾರರು ತಕ್ಷಣ ಪೋಲೀಸ್/ಮಕ್ಕಳ ಸಹಾಯವಾಣಿ/ಸ್ವಯಂಸೇವಾ ಸಂಸ್ಥೆಗಳಿಗೆ ಮಾಹಿತಿ ನೀಡಬೇಕು.

vii. ಸಾಗಾಣಿಕೆಗೆ ಒಳಪಟ್ಟ ವ್ಯಕ್ತಿಯನ್ನು ಗಮ್ಯ ರಾಜ್ಯದಿಂದ ಗೃಹ ರಾಜ್ಯಕ್ಕೆ ಮರಳಿಸಬೇಕು. ಇದಕ್ಕೆ ಸಂಬಂಧಿಸಿದ ಪ್ರವಾಸ ವೆಚ್ಚ, ಊಟ ಹಾಗೂ ಪ್ರಾಸಂಗಿಕ ವೆಚ್ಚ, ಬೆಂಗಾವಲಿಗರೂ ಸೇರಿದಂತೆ ಭರಿಸುವ ಜವಾಬ್ದಾರಿ ರಾಜ್ಯ ಸರ್ಕಾರದ್ದಾಗಿರುತ್ತದೆ. ರಾಜ್ಯ ಸರ್ಕಾರವು ಇದಕ್ಕಾಗಿ ಪ್ರತ್ಯೇಕ ಆಯವ್ಯಯವನ್ನು ಒದಗಿಸಬೇಕು.

viii. ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮುಖಾಂತರ ಮಕ್ಕಳ ಸಹಾಯವಾಣಿ ಹಾಗೂ ಮಹಿಳಾ ಸಹಾಯವಾಣಿ ಬಗ್ಗೆ ಸಾಕಷ್ಟು ಪ್ರಚಾರವನ್ನು ಜನರಲ್ಲಿ ಜಾಗೃತಿ ಮೂಡುವ ಸಮಯದವರೆಗೆ ನೀಡುವುದು.

ix. ಸಾಗಾಣಿಕೆಗೆ ಒಳಪಟ್ಟ ವ್ಯಕ್ತಿಗಳನ್ನು ಸುರಕ್ಷಿತವಾಗಿ ಇಡಬಹುದಾದ ಅರ್ಹ ವ್ಯಕ್ತಿಗಳ ಹಾಗೂ ಅರ್ಹ ಸಂಸ್ಥೆಗಳ ಹೆಸರನ್ನು ಪಟ್ಟಿ ಮಾಡಿ ಈ ಪಟ್ಟಿಯನ್ನು ರಾಜ್ಯದ ಹಾಗೂ ಜಿಲ್ಲೆಯ ಎಲ್ಲಾ ಪೋಲೀಸ್ ಕೇಂದ್ರಸ್ಥಾನಗಳಿಗೆ, ಪೋಲೀಸ್ ಠಾಣೆಗಳಿಗೆ, ನ್ಯಾಯಾಲಯಗಳಿಗೆ ಮತ್ತು ಸ್ವಯಂಸೇವಾ ಸಂಸ್ಥೆಗಳಿಗೆ ನೀಡುವುದು.

x. ಸಾಗಾಣಿಕೆಗೆ ಒಳಪಟ್ಟ ಮಾನಸಿಕ ಅಸ್ವಸ್ಥ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಒದಗಿಸಬಹುದಾದ ಅರ್ಹ ಸಂಸ್ಥೆಗಳನ್ನು ಘೋಷಿಸುವುದು.

xi. ಸಾಗಾಣಿಕೆಗೆ ಒಳಪಟ್ಟ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ನ್ಯಾಯಾಲಯ ನಡವಳಿಕೆಗಳನ್ನು ಏಕಾಂತವಾಗಿ ಹಾಗೂ ರಹಸ್ಯವಾಗಿ ನಡೆಸುವಂತೆ ನಿರ್ದೇಶನ ಹೊರಡಿಸುವುದು.

xii. ತರಬೇತಿ ಪಡೆದಿರುವ ಮಕ್ಕಳ ಕಲ್ಯಾಣ ಅಧಿಕಾರಿಗಳನ್ನು ಪ್ರತಿ ಪೋಲೀಸ್ ಠಾಣೆಯಲ್ಲಿ ನೇಮಿಸುವುದು.

xiii. ಪ್ರತಿ ಪೋಲೀಸ್ ಠಾಣೆಯು ಮಹಿಳೆಯರಿಗೆ ಪ್ರತ್ಯೇಕವಾದ ಹಾಗೂ ಸ್ವಚ್ಛವಾದ ಶೌಚಾಲಯವನ್ನು ಹೊಂದಿರಬೇಕು.

.....2

## II. ರಕ್ಷಣಾ ತಂಡದ ಸದಸ್ಯರಿಗೆ:

### ಅ) ರಕ್ಷಣಾಪೂರ್ವ ಕಾರ್ಯಾಚರಣೆಗೆ ಕಾರ್ಯತಂತ್ರ.

- ಸಾಗಾಣಿಕೆಗೆ ಒಳಪಟ್ಟ ಮಕ್ಕಳ ರಕ್ಷಣೆಗಾಗಿ.
- ವೇಶ್ಯಾಗೃಹದಿಂದ ಹೊರಗೆ ಬರಲಿಚ್ಛಿಸುವ ಮಹಿಳೆಯರ ಹಾಗೂ ಸಾಗಾಣಿಕೆಗೆ ಒಳಪಟ್ಟ 18 ವರ್ಷಕ್ಕಿಂತ ಕಡಿಮೆ ವಯೋಮಿತಿಯಲ್ಲಿರುವ ಮಕ್ಕಳ ಮಾಹಿತಿಯನ್ನು ಒದಗಿಸುವ ಮಾಹಿತಿದಾರರ ಜಾಲವನ್ನು ನಿರ್ಮಿಸುವುದು, ನಿರ್ದಿಷ್ಟ ಮಾಹಿತಿಯ ಪತ್ರ, ಇ-ಮೇಲ್, ಛಾಯಾಚಿತ್ರ, ಮಚ್ಚೆ, ಗಾಯದ ಗುರುತು, ಗುರುತಿನ ಚಿಹ್ನೆ, ವ್ಯಕ್ತಿತ್ವದ ಲಕ್ಷಣಗಳು, ವಿಳಾಸ, ಸಂಬಂಧಿಕರು ಮತ್ತು ಮಗುವಿಗೆ ತಿಳಿದಿರುವ ವ್ಯಕ್ತಿಗಳು, ಮತ್ತು ಸಂಬಂಧಿಕರ ಹಾಜರಿ, ವ್ಯಕ್ತಿಯ ವಿವರಣೆ ಮತ್ತು ಚಾಳಿಯನ್ನಾಧರಿಸಿ ಆಕೃತಿ ಸ್ಪಷ್ಟಗೊಳಿಸುವ ಕಂಪ್ಯೂಟರ್ ಗ್ರಾಫಿಕ್ಸ್ (ಉದಾ: ಉಚ್ಚರಣೆ, ನಿರ್ದಿಷ್ಟ ಹಾವಭಾವ ಅಂದರೆ ಪದೇ ಪದೇ ಬೆರಳನ್ನು ಉಜ್ಜುವುದು, ಕಣ್ಣುಗಳನ್ನು ಮಿಟುಕಿಸುವುದು ಇತ್ಯಾದಿ) ರೂಪದಲ್ಲಿರಬಹುದು. ಮಾಹಿತಿ ನೀಡುವವರಿಗೆ ಸಣ್ಣ ಸಂಭಾವನೆ ನೀಡಿದಲ್ಲಿ ಅವರು ಮಾಹಿತಿ ನೀಡುವುದನ್ನು ಮುಂದುವರೆಸುವುದನ್ನು ನಿರೀಕ್ಷಿಸಬಹುದು.
- ಸಾಗಾಣಿಕೆಗೆ ಒಳಗಾಗಿರುವ ಮಗುವನ್ನು ನಕಲಿ ಗಿರಾಕಿ ಬಳಸಿಕೊಳ್ಳುವ ಮುಖಾಂತರ ಗುರುತಿಸಿ ಮತ್ತು ಲಭ್ಯವಿರುವ ಮಾಹಿತಿಯು ಸರಿಯೇ ಎಂದು ಪರೀಕ್ಷಿಸಿ, ನಕಲಿ ಗಿರಾಕಿಯು ಮಗುವಿನ ಜೊತೆಗೆ ನೇರವಾಗಿ ಮಾತನಾಡಿ ಮಗುವಿನ ರಕ್ಷಣಾ ಕಾರ್ಯಾಚರಣೆಗೆ ಹೆಚ್ಚಿನ ಮಾಹಿತಿಯನ್ನು/ಸಹಕಾರವನ್ನು ನೀಡುವಂತೆ ಉತ್ತೇಜಿಸಬೇಕು.
- ಪೊಲೀಸ್ ಅಥವಾ ಸಮುದಾಯ ರಕ್ಷಣಾ ಕಾರ್ಯಾಚರಣೆಯಲ್ಲಿ ಸ್ವಯಂಸೇವಾ ಸಂಘದವರು ಹಾಗೂ ಸಮಾಜ ಸೇವಾ ಕಾರ್ಯಕರ್ತರನ್ನು ತೊಡಗಿಸಿಕೊಳ್ಳಬೇಕು.
- ರಕ್ಷಣಾ ಕಾರ್ಯಾಚರಣೆಗೆ ಕಡಿಮೆ ಸಮಯ ವ್ಯಯವಾಗುವಂತೆ ಕಾರ್ಯತಂತ್ರ ಯೋಜನೆಯನ್ನು ತಯಾರಿಸಿರಬೇಕು. ಆ ಯೋಜನೆಯು ಕೆಳಗಿನವುಗಳನ್ನು ಹೊಂದಿರಬೇಕು.

i. ಮೂಲ ಮಾಹಿತಿ ನೀಡುವ ವ್ಯಕ್ತಿಗಳ ಸಹಾಯವನ್ನು ಯಾಚಿಸಿ, ಉದಾಹರಣೆಗೆ ಸಣ್ಣ ಪೆಟ್ಟಿಗೆ ಅಂಗಡಿಯವರು, ಕಸ ಗುಡಿಸುವವರು, ಅಲ್ಪಕಾಲದ ಮನೆಗೆಲಸದವರು, ಹಾಲು ಮಾರುವವರು, ಅಥವಾ ಯಾವುದೇ ವ್ಯಕ್ತಿ ಸದರಿ ವೇಶ್ಯಾಗೃಹಕ್ಕೆ ಸೇವೆ ಸಲ್ಲಿಸುವವರು ವೇಶ್ಯಾಗೃಹದ ನಕ್ಷೆ ಹಾಗೂ ಅಡಗಿಕೊಳ್ಳುವ ಸ್ಥಳದ ಮಾಹಿತಿ ಹೊಂದಿರುವ ಸ್ಥಳೀಯ ಕಂಟ್ರ್ಯಾಕ್ಟರ್ ಹಾಗೂ ಗೃಹ ನಿರ್ಮಿಸುವವರು.

ii. ರಕ್ಷಣಾ ತಂಡವು ಅನೈತಿಕ ಸಾಗಣೆ ತಡೆಗಟ್ಟುವ (ITPA) ಕಾಯ್ದೆ 1956ರ ಕಲಂ 13 ರಲ್ಲಿ ವ್ಯಾಖ್ಯಾನಿಸಿರುವಂತೆ ಸಹಾಯಕ ಪೊಲೀಸ್ ಆಯುಕ್ತರು/ಉಪ ಪೊಲೀಸ್ ಆಯುಕ್ತರು (ACP) ಮತ್ತು/ಅಥವಾ (DCP) ಆರಕ್ಷಣಾ ಮಹಿಳೆ ಸಿಬ್ಬಂದಿ ಸೇರಿದಂತೆ ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿ ಮತ್ತು ಸಮಾಜ ಸೇವಾ ಕಾರ್ಯಕರ್ತೆಯರನ್ನು ಹೊಂದಿರಬೇಕು. ರಕ್ಷಣಾ ತಂಡಡ ಸದಸ್ಯರ ಸಂಖ್ಯೆ, ದಾಳಿ ನಡೆದಿರುವ ವೇಶ್ಯಾಗೃಹಗಳ ಹಾಗೂ ಸಾಗಾಣಿಕೆಗೆ ಒಳಪಟ್ಟವರ ಸಂಖ್ಯೆಗೆ ಅನುಗುಣವಾಗಿರಬೇಕು.

iii. ರಕ್ಷಣಾ ಕಾರ್ಯಾಚರಣೆಯ ಗೌಪ್ಯತೆ ಮತ್ತು ಗುಟ್ಟನ್ನು ಕಾಪಾಡಿಕೊಳ್ಳಬೇಕು. ರಕ್ಷಣಾ ತಂಡದ ಎಲ್ಲಾ ಸದಸ್ಯರು ಕಾರ್ಯಾಚರಣೆ ಪ್ರಾರಂಭವಾಗುವ 2 ಗಂಟೆಗಳ ಮುನ್ನ ಒಂದು ಸಾಮಾನ್ಯ ಸ್ಥಳದಲ್ಲಿ ಸೇರಬೇಕು.

iv. ಮಾಹಿತಿ ಸೋರುವಿಕೆಯನ್ನು ತಡೆಗಟ್ಟುವ ಸಲುವಾಗಿ ಕಾರ್ಯಾಚರಣೆ ಪ್ರಾರಂಭವಾಗುವ ಮುನ್ನ ತಂಡದ ಮುಖಂಡರು ತಂಡದ ಸದಸ್ಯರ ಮೊಬೈಲ್ ಫೋನ್ ಹಾಗೂ ಸಂವಹನದ ಇನ್ನಿತರ ವಸ್ತುಗಳನ್ನು ಅವರ ವಶಕ್ಕೆ ಪಡೆದುಕೊಳ್ಳುವುದು.

v. ರಕ್ಷಣಾ ಕಾರ್ಯಾಚರಣೆಗೆ ಅಳವಡಿಸುವ ಕಾರ್ಯತಂತ್ರ ಹಾಗೂ ವಿವಿಧ ಹಂತಗಳನ್ನು ಈ ಸಮಯದಲ್ಲಿ ವಿವರಿಸಬೇಕು. ತಂಡದ ಪ್ರತಿ ಸದಸ್ಯರ ಪಾತ್ರವನ್ನು ವಿವರಿಸಿ ತಿಳಿಸಬೇಕು. ಹಾಗೂ ಅವರಿಗೆ ಏನಾದರೂ ಸಂಶಯವಿದ್ದಲ್ಲಿ ನಿವಾರಿಸಬೇಕು.

vi. ಮೂಲ ಪಾತ್ರದಾರರನ್ನು ಸಿದ್ಧಗೊಳಿಸುವುದು ಒಳ ತಂಡಗಳ ರಚನೆ, ಸಂದರ್ಭ ಹಾಗೂ ದಾಳಿ ನಡೆಸುವ ವೇಶ್ಯಾಗೃಹಗಳ ಸಂಖ್ಯೆ ಹಾಗೂ ರಕ್ಷಿಸಬೇಕಿರುವ ಅಪ್ರಾಪ್ತರ ಸಂಖ್ಯೆಯನ್ನು ಅವಲಂಬಿಸಿರುತ್ತದೆ.

vii. ಯಾವುದೇ ಸಂದರ್ಭದಲ್ಲಿ ನಕಲಿ ಗಿರಾಕಿಯನ್ನು ರಕ್ಷಣಾ ಕಾರ್ಯಾಚರಣೆಯ ಪೂರ್ವವಾಗಲೀ, ಕಾರ್ಯಾಚರಣೆಯ ಸಂದರ್ಭದಲ್ಲಾಗಲೀ ಅಥವಾ ರಕ್ಷಣೆ ಕಾರ್ಯಾಚರಣೆಯ ನಂತರವಾಗಲೀ ಬಹಿರಂಗಪಡಿಸಬಾರದು.

viii. ಯಾವುದೇ ಸಂದರ್ಭದಲ್ಲೂ ರಕ್ಷಣಾ ಕಾರ್ಯಾಚರಣೆಯಲ್ಲಿ ನೇರವಾಗಿ ತೊಡಗಿದವರನ್ನು ಹೊರತುಪಡಿಸಿ ಬೇರೆಯವರಿಗೆ ಕಾರ್ಯಾಚರಣೆಯ ಬಗ್ಗೆ ತಿಳಿಸಬಾರದು. ಒಂದು ವೇಳೆ ಮಾಧ್ಯಮದವರಿಗೆ ತಿಳಿದ ಪಕ್ಷದಲ್ಲಿ ರಕ್ಷಣಾ ಕಾರ್ಯಾಚರಣೆಯ ಬಗ್ಗೆ ಸುದ್ದಿ/ವರದಿ ಮಾಡುವ ಅವಕಾಶವನ್ನು ನೀಡಬಾರದು.

ix. ರಕ್ಷಿಸಿದ ಮಕ್ಕಳನ್ನು ಸೂಕ್ತ ರಕ್ಷಣಾಗೃಹ/ ಸರ್ಕಾರಿ ಬಾಲ/ಬಾಲಕಿಯರ ಮಂದಿರದಲ್ಲಿ ಇಡಲು ಖಾಲಿ ಇದೆಯೇ ಎಂದು ಮೊದಲೇ ತಿಳಿದುಕೊಂಡಿರಬೇಕು. ಇದನ್ನು ಅತ್ಯಂತ ಗೌಪ್ಯವಾಗಿ ಇಡಬೇಕು ಹಾಗೂ ರಕ್ಷಣಾ ಕಾರ್ಯಾಚರಣೆಯ ಬಗ್ಗೆ ಮಾಹಿತಿ ಸೋರದಂತೆ ಎಚ್ಚರ ವಹಿಸಬೇಕು.

x. ರಕ್ಷಣಾ ಕಾರ್ಯಾಚರಣೆಯ ಮುನ್ನ ಆರಕ್ಷಕ ಇಲಾಖೆಯ ಎಲ್ಲಾ ರೀತಿಯ ಔಪಚಾರಿಕ ಕಾರ್ಯಗಳನ್ನು ಪೂರ್ಣಗೊಳಿಸಬೇಕು.

xi. ರಕ್ಷಣಾ ಕಾರ್ಯಾಚರಣೆಯ ಸಂದರ್ಭದಲ್ಲಿ ರಕ್ಷಣಾ ತಂಡದ ಸದಸ್ಯರ ಹೆಣ್ಣು ಮಕ್ಕಳನ್ನು, ಹೆಂಗಸರನ್ನು ಅಥವಾ ಅವರ ವಸ್ತುಗಳನ್ನು ಮುಟ್ಟಬಾರದು. ತಂಡದ ಮಹಿಳಾ ಸದಸ್ಯರು ಅವರೊಂದಿಗೆ ವ್ಯವಹರಿಸಬೇಕು.

xii. ರಕ್ಷಣಾ ಕಾರ್ಯಾಚರಣೆ ಸಂದರ್ಭದಲ್ಲಿ ರಕ್ಷಣಾ ತಂಡದ ಸದಸ್ಯರು/ಹುಡುಗಿಯರಿಗೆ ಹಾಗೂ ಮಹಿಳೆಯರಿಗೆ ಬಯ್ಯುವ / ಅವಾಚ್ಯ ಶಬ್ದಗಳನ್ನು ಬಳಸಬಾರದು.

<u>ಸಮುದಾಯ ಮಟ್ಟದಲ್ಲಿ ರಕ್ಷಣಾ ಕಾರ್ಯಾಚರಣೆ:</u>

- ಸಮುದಾಯವನ್ನು ಸಾಗಾಣಿಕೆಯ ಬಗ್ಗೆ ಮಾಹಿತಿ ನೀಡಿ ಸಮಸ್ಯೆಗೆ ಸ್ಪಂದಿಸುವಂತೆ ಮಾಡಬೇಕು. ಈ ಶೋಷಣೆಯ ಸಂದರ್ಭದಿಂದ ಉಂಟಾಗುವ ಕೆಡುಕಿನ ಬಗ್ಗೆ ಹಾಗೂ ಇಂತಹ ಪ್ರಕರಣಗಳ ಬಗ್ಗೆ ಅವರಿಗೆ ಜ್ಞಾನವಿದ್ದ ಪಕ್ಷದಲ್ಲಿ, ಏನು ಮಾಡಬೇಕೆಂದು ತಿಳಿಸಬೇಕು. ಸಮುದಾಯದ ಸದಸ್ಯರು ಸಮುದಾಯದಲ್ಲಿ ಸಾಗಾಣಿಕೆಗೆ ತುತ್ತಾದ ಮಗುವಿನ ಅನಿಯತ ಚಲನೆ ಬಗ್ಗೆ, ಸಾಗಾಣಿಕೆದಾರರ ಬಗ್ಗೆ, ಅಡಗಿಕೊಳ್ಳುವ ಸ್ಥಳಗಳ ಬಗ್ಗೆ ನಿಗಾ ಇಡಲು ಉತ್ತೇಜಿಸಬೇಕು.
- ಸಮುದಾಯದ ಸದಸ್ಯರು ತಕ್ಷಣ ಸಂಶಯಾಸ್ಪದ ವ್ಯಕ್ತಿಗಳ ಬಗ್ಗೆ ಮಾಹಿತಿಯನ್ನು ಸಾಗಾಣಿಕೆಗೆ ತುತ್ತಾದವರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿರುವ ಹತ್ತಿರದ ಸ್ವಯಂಸೇವಾ ಸಂಸ್ಥೆಗೆ ತಿಳಿಸಬೇಕು. ಅವರ ಅನುಪಸ್ಥಿತಿಯಲ್ಲಿ ಹತ್ತಿರದ ಪೋಲೀಸ್ ಠಾಣೆಗೆ ತಿಳಿಸಬೇಕು.
- ಸಾಗಾಣಿಕೆಗೆ ಬಲಿಯಾದವರು ಅದೇ ಸಮುದಾಯಕ್ಕೆ ಸೇರಿದವರಾಗಿದ್ದಲ್ಲಿ ಅವರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಬೇಕು.

<u>ಆ) ರಕ್ಷಣಾ ಕಾರ್ಯಾಚರಣೆಗೆ ಕಾರ್ಯತಂತ್ರ</u>

i. ವೇಶ್ಯಾಗೃಹದ ಸಮುದಾಯದ ಮೇಲೆ ವ್ಯವಸ್ಥಿತ ರೀತಿಯಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ನಡೆಸಬೇಕು.

ii. ವೇಶ್ಯಾಗೃಹ/ಸಮುದಾಯವನ್ನು ಪ್ರವೇಶಿಸುವ ಮುನ್ನ ರಕ್ಷಣಾ ತಂಡದ ಸದಸ್ಯರನ್ನು ಪೂರ್ವಯೋಜಿತ ರೀತಿಯಲ್ಲಿ ಅವರವರ ಸ್ಥಳದಲ್ಲಿ ಇರಿಸಬೇಕು.

iii. ತಕ್ಷಣ ಮಗುವನ್ನು ಇಟ್ಟಿರುವ ಸ್ಥಳ/ಪ್ರದೇಶಕ್ಕೆ ಹೋಗಬೇಕು.

iv. ಮಗುವನ್ನು ವೇಶ್ಯಾಗೃಹ/ಸಮುದಾಯದಿಂದ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹೊರತರಬೇಕು. ಆ ಮಗು ತನ್ನ ವಸ್ತುಗಳನ್ನು ಸಂಗ್ರಹಿಸಿ ತರಬೇಕು. ಒಂದು ಪಕ್ಷ ಅವಳಿಗೆ ಮಗು ಅಥವಾ ಮಕ್ಕಳಿದ್ದಲ್ಲಿ ಅವಳನ್ನು ಅವರಿಂದ ಬೇರ್ಪಡಿಸದಂತೆ ಖಾತ್ರಿ ಪಡಿಸಬೇಕು.

v. ಮಗುವನ್ನು ಅನುಕಂಪದಿಂದ ನೋಡಿಕೊಳ್ಳಬೇಕೆ ಹೊರತು ಅಪರಾಧಿಯಂತಲ್ಲ.

vi. ಮಾನಸಿಕ ದೌರ್ಬಲ್ಯ ಅಥವಾ ಅಸ್ವಸ್ಥ ಮಕ್ಕಳಿದ್ದಲ್ಲಿ ಅಥವಾ ಮಹಿಳೆ ಇದ್ದಲ್ಲಿ ಅವರ ವಯಸ್ಸನ್ನು ಪರಿಗಣಿಸದೆ ಅಲ್ಲಿಂದ ಹೊರತನ್ನಿ

vii. ನಿಮ್ಮ ದೇಹ ಭಾಷೆ/ಹಾವ-ಭಾವಗಳ ಬಗ್ಗೆ ಅರಿವಿರಲಿ. ಅನಾವಶ್ಯಕ ಸಂಪರ್ಕ, ಅನಾವಶ್ಯಕ ಸನ್ನೆ, ದೈಹಿಕ ಶಕ್ತಿ ಬಳಸುವುದು, ಅಶ್ಲೀಲ ಹಾಗೂ ಸೂಕ್ತವಲ್ಲದ ಭಾಷೆಗಳನ್ನು ವೇಶ್ಯಾಗೃಹದ ಯಾವುದೇ ನಿವಾಸಿಗೆ ಬಳಸಬಾರದು.

viii. ವೇಶ್ಯಾಗೃಹದ ಮಾಲೀಕರಿಂದ, ವೆಚ್ಚ ತೋರಿಸುವ ಎಲ್ಲಾ ದಾಖಲೆಗಳನ್ನು ಆದಾಯ/ಪಾವತಿ/ ಆರ್ಥಿಕ ವಹಿವಾಟು ಮತ್ತು ಮುಖ್ಯ ದಾಖಲಾತಿಗಳನ್ನು ವಶಪಡಿಸಿಕೊಂಡಲ್ಲಿ ಇವು ನ್ಯಾಯಾಲಯದಲ್ಲಿ ವಸ್ತು ಸಾಕ್ಷ್ಯದ ಮುಖ್ಯ ಸಾಕ್ಷಿಗಳಾಗಬಹುದು.

ix. ರಕ್ಷಿಸಿದವರ ಗುರುತನ್ನು ಗೌಪ್ಯವಾಗಿಡಬೇಕು. ಅವರ ಹೆಸರು, ವಿಳಾಸ, ಛಾಯಾಚಿತ್ರ, ಅಥವಾ ಇನ್ಯಾವುದೇ ಮಾಹಿತಿಯನ್ನು ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟಿಸಬಾರದು ಅಥವಾ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರ ಮಾಡಬಾರದು, ಇದು ಬಾಲನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ 2000 ರ ಕಲಂ 21ರ ಪ್ರಕಾರ ಆಧ್ಯಾದೇಶೀಯವಾಗಿರುತ್ತದೆ. (Mandatory)

x. ನಕಲಿ ಗಿರಾಕಿಯ ಗುರುತು ಮತ್ತು ವಾಸಿಸುವ ಸ್ಥಳವನ್ನು ಗೌಪ್ಯವಾಗಿಡಬೇಕು.

xi. ರಕ್ಷಣಾ ತಂಡದ ಸದಸ್ಯರು ರಕ್ಷಣಾ ತಂಡದ ಮುಖಂಡರಿಗೆ ಬದ್ಧರಾಗಿರುತ್ತಾರೆ. ರಕ್ಷಿಸಿದ ಮಗುವಿನ ಯಾವುದೇ ಹಕ್ಕುಗಳ ಉಲ್ಲಂಘನೆಯಾದಲ್ಲಿ ಅದನ್ನು ಕ್ರಮಬದ್ಧ ರೀತಿಯಲ್ಲಿ ವ್ಯವಹರಿಸಬೇಕು.

**ಇ) ರಕ್ಷಣಾ ಕಾರ್ಯಾಚರಣೆ ನಂತರದ ಕಾರ್ಯತಂತ್ರ.**

i. ರಕ್ಷಿಸಿದ ವ್ಯಕ್ತಿಯನ್ನು ಆಪಾದಿತ ವ್ಯಕ್ತಿಯ ದೃಷ್ಠಿ ಹಾಗೂ ಶಬ್ದದಿಂದ ಬೇರ್ಪಡಿಸಬೇಕು. ರಕ್ಷಿಸಿದ ಮಗುವನ್ನು ಪೋಲೀಸ್ ಠಾಣೆಗೆ ಕೊಂಡೊಯ್ಯುವಾಗ ಮತ್ತು ವೇಶ್ಯಾಗೃಹದ ಮಾಲೀಕರು/ಸಾಗಾಣಿಕೆದಾರರನ್ನು ಪ್ರತ್ಯೇಕ ವಾಹನದಲ್ಲಿ ಕರೆದುಕೊಂಡು ಹೋಗಬೇಕು. ಇದು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಅವರನ್ನು ಒಬ್ಬರಿಂದ ಇನ್ನೊಬ್ಬರನ್ನು ಬೇರ್ಪಡಿಸಿ ಇಡಬೇಕು. ಇದರಿಂದ ಆಪಾದಿತ ವ್ಯಕ್ತಿಯು ಮಗುವನ್ನು ಭಯಪಡಿಸುವುದರಿಂದ ಅಥವಾ ಬೆದರಿಸುವುದರಿಂದ ತಪ್ಪಿಸಿದಂತಾಗುತ್ತದೆ.

ii. ಯಾವುದೇ ಸಂದರ್ಭದಲ್ಲಿಯೂ ಮಗುವನ್ನು ಸೆರೆಮನೆಯಲ್ಲಿ ಇಡಬಾರದು. ದಾಳಿಯ ನಂತರ ಮಗುವನ್ನು ತಕ್ಷಣ ಪ್ರಮಾಣಿತ ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಬೇಕು. ರಕ್ಷಿತ ವ್ಯಕ್ತಿಯು ಅಪರಾಧಿಯಲ್ಲದ ಕಾರಣ, ಆಪಾದಿತನೊಂದಿಗೆ ವರ್ತಿಸುವ ರೀತಿಯಲ್ಲಿ ವರ್ತಿಸಬಾರದು. ಅವರನ್ನು ವೇಶ್ಯಾಗೃಹದ ಮಾಲೀಕರಿಂದ/ಸಾಗಾಣಿಕೆದಾರರಿಂದ ಬೇರ್ಪಡಿಸಿ ಇಡಬೇಕು.

iii. ನಂಬಲರ್ಹವಾದ ಇಬ್ಬರು ಪ್ರತ್ಯೇಕ ಸಾಕ್ಷಿ ನೀಡುವ ವ್ಯಕ್ತಿಗಳ ಸಮ್ಮುಖದಲ್ಲಿ ರಕ್ಷಣಾ ಕಾರ್ಯಾಚರಣೆಯ ಬಗ್ಗೆ ದಿನಚರಿಯಲ್ಲಿ ದಾಖಲಿಸಿ ಅದನ್ನು ಅಧಿಕೃತಗೊಳಿಸುವ ಸಲುವಾಗಿ ಅವರಿಂದ ಸಹಿ ಪಡೆಯಿರಿ.

iv. ರಕ್ಷಿತ ವ್ಯಕ್ತಿಯಿಂದ ಅಥವಾ ಸ್ವಯಂಸೇವಾ ಸಂಸ್ಥೆಯಿಂದ ತಕ್ಷಣ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸಬೇಕು. ಸದರಿ ವರದಿಯಲ್ಲಿ ಅಪರಾಧದ ಸ್ಥಳವನ್ನು ಅಪರಾಧದ ವಿವರಣೆ, ಸಾಗಣಿಕೆಗೆ ಒಳಗಾದ ಸಮಯದಿಂದ ರಕ್ಷಣಾ ಕಾರ್ಯಾಚರಣೆವರೆಗೂ ಅಪಾದಿತನು ಎಸಗಿದ ಅಪರಾಧದ ವಿವರವನ್ನೊಳಗೊಂಡಿರಬೇಕು. ಪ್ರಥಮ ಮಾಹಿತಿ ವರದಿಯು ಎಷ್ಟು ಸಾಧ್ಯವೋ ಅಷ್ಟು ವಿವರವಾಗಿರಬೇಕು. ಮಗುವಿನ ಪ್ರಥಮ ಮಾಹಿತಿ ವರದಿ ಪ್ರತಿಯನ್ನು ಪಡೆಯಬೇಕು. ಅದನ್ನು ಸ್ವಯಂಸೇವಾ ಸಂಸ್ಥೆ/ರಕ್ಷಣಾಗೃಹ/ಮಕ್ಕಳ ಮಂದಿರದಲ್ಲಿ, ಎಲ್ಲಿ ಮಗುವನ್ನು ಇಡಲಾಗಿರುತ್ತದೆಯೋ ಅಲ್ಲಿ ಸುರಕ್ಷಿತ ವಶದಲ್ಲಿಡಬೇಕು.

v. ಭಾರತ ದಂಡ ಸಂಹಿತೆ ಅನೈತಿಕ ಸಾಗಾಣಿಕೆ ತಡೆಗಟ್ಟುವ ಕಾಯ್ದೆ 1860, ಬಾಲನ್ಯಾಯ ಮಕ್ಕಳ (ಆರೈಕೆ ಮತ್ತು ರಕ್ಷಣೆ) ಕಾಯ್ದೆ 2000 ರಡಿ ಬರುವ ಎಲ್ಲಾ ಸಂಬಂಧಿಸಿದ ಕಲಂಗಳನ್ನು ಸಾಗಾಣಿಕೆದಾರರ ಮತ್ತು ವೇಶ್ಯಾಗೃಹದ ಮಾಲೀಕರ ವಿರುದ್ಧ ಬಳಸಬೇಕು.

vi. ಮಗುವನ್ನು ಸರ್ಕಾರದಿಂದ ಅಥವಾ ಸ್ವಯಂಸೇವಾ ಸಂಸ್ಥೆಯಿಂದ ನಡೆಯುವ ರಕ್ಷಣಾ ಗೃಹ ಅಥವಾ ಮಕ್ಕಳ ಮಂದಿರದ ಪ್ರತಿನಿಧಿಯ ವಶಕ್ಕೆ ಒಪ್ಪಿಸಿ, ಮಗುವಿಗೆ ಸುರಕ್ಷಿತ ಹಾಗೂ ಯೋಗಕ್ಷೇಮದ ದೃಷ್ಠಿಯಿಂದ ಸದರಿ ಗೃಹದಲ್ಲಿ ಇಡಲಾಗುವುದೆಂದು ಸಮಾಲೋಚನೆ ಮಾಡಿ ತಿಳಿಸಬೇಕು.

vii. **ಈ ಕೆಳಗಿನವುಗಳನ್ನು ಖಾತ್ರಿಪಡಿಸುವುದು ಬಹು ಮುಖ್ಯವಾಗಿರುತ್ತದೆ:**

- ಮಗುವನ್ನು ರಕ್ಷಣಾ/ಮಕ್ಕಳ ಮಂದಿರಕ್ಕೆ ಪೋಲೀಸ್ ಕೊಂಡೊಯ್ಯುವಾಗ ಸಾಧಾರಣ ಬಟ್ಟೆ ಧರಿಸಿರಬೇಕು. ಸಮವಸ್ತ್ರದಲ್ಲಿರಬಾರದು.
- ರಕ್ಷಣಾಗೃಹ/ಮಕ್ಕಳ ಮಂದಿರದಲ್ಲಿ ಕಾರ್ಯ ನಿರ್ವಹಿಸುವವರು ಮಗುವಿನ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಗಾಣಿಕೆದಾರರು ಅಥವಾ ವೇಶ್ಯಾಗೃಹದ ಮಾಲೀಕರು, ದಲ್ಲಾಳಿಗಳು ಮಗುವನ್ನು ಸಂಪರ್ಕಿಸದಂತೆ ಎಚ್ಚರ ವಹಿಸಬೇಕು.
- ಮಗುವಿನ ವಯಸ್ಸಿನ ಪರಿಶೀಲನೆ ಒಳಗೊಂಡಂತೆ ವೈದ್ಯಕೀಯ ಪರೀಕ್ಷೆಯನ್ನು ಸರಿಯಾಗಿ ಹಾಗೂ ವೈಜ್ಞಾನಿಕವಾಗಿ ನಡೆಸಬೇಕು. ಅನೈತಿಕ ಸಾಗಾಣಿಕೆ ತಡೆಗಟ್ಟುವ ಕಾಯ್ದೆ 1956 ರ ಕಲಂ 15(5ಎ) ಹಾಗೂ ಬಾಲನ್ಯಾಯ (ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2000 ರ ಕಲಂ 49 ರ ಪ್ರಕಾರ ವಯಸ್ಸಿನ ಪರಿಶೀಲನಾ ಪರೀಕ್ಷೆ ಕಡ್ಡಾಯವಾಗಿರುತ್ತದೆ.
- ಮಗುವನ್ನು ವಶಕ್ಕೆ ತೆಗೆದುಕೊಂಡ 24 ಗಂಟೆಯೊಳಗೆ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಬೇಕು. ಒಂದು ಪಕ್ಷ ಮಕ್ಕಳ ಕಲ್ಯಾಣ ಸಮಿತಿ ಲಭ್ಯವಿಲ್ಲದಿದ್ದಲ್ಲಿ ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್‌ರ ಮುಂದೆ ಪರಿಹಾರಕ್ಕಾಗಿ ಹಾಜರುಪಡಿಸಬೇಕು.
- ಮಗುವಿಗೆ ತಕ್ಷಣ ಉತ್ತಮ ಮಟ್ಟದ ಸಮಾಲೋಚನೆ, ಆರೋಗ್ಯ ರಕ್ಷಣೆ ಮತ್ತು ಕಾನೂನು ನೆರವು ದೊರಕಬೇಕು. ಮಗುವಿನ ಪರವಾಗಿ ಸ್ವಯಂಸೇವಾ ಸಂಸ್ಥೆಯ ಸಿಬ್ಬಂದಿ, ಸಮಾಜ ಕಾರ್ಯಕರ್ತರನ್ನೊಳಗೊಂಡಂತೆ ಅಥವಾ ರಕ್ಷಣಾಗೃಹ, ಮಕ್ಕಳ ಮಂದಿರದವರು ವಕಾಲತ್‌ನಾಮ ಸಹಿ ಮಾಡಬೇಕು.(ಅಥವಾ ವಕೀಲರು ಪ್ರತಿನಿಧಿಸಲು ಸಮ್ಮತಿ ನೀಡಬೇಕು)
- ಮಗುವು ಸುರಕ್ಷಿತ ಗೃಹ/ಸ್ಥಳ ಬಿಡುವ ಸಂದರ್ಭದಲ್ಲೆಲ್ಲಾ ಸಮಾಜಸೇವಾ ಕಾರ್ಯಕರ್ತರು ಮಗುವಿನ ಜೊತೆಗಿರಬೇಕು.

. . . . 5

- ಮಗು ನ್ಯಾಯಾಲಯದಲ್ಲಿ ಸಾಕ್ಷ್ಯಗಳನ್ನು ಒದಗಿಸುವಾಗಲೆಲ್ಲಾ ಸಮಾಲೋಚಕರು ಮಗುವಿನ ಜೊತೆಗಿರಬೇಕು.
- ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ಅಥವಾ ಸಕ್ಷಮ ಪ್ರಾಧಿಕಾರ ರಕ್ಷಣಾ ಗೃಹಕ್ಕೆ 15 ದಿನಗಳಿಗೊಮ್ಮೆ ಭೇಟಿ ನೀಡಿ ಕಾನೂನು ನಡಾವಳಿ ಜರುಗಿಸಲು ಕ್ರಮ ವಹಿಸಬೇಕು.
- ಮಗುವಿಗೆ ನ್ಯಾಯಾಲಯದ ನಡವಳಿ ಬಗ್ಗೆ ಪೂರ್ಣವಾಗಿ ವಿವರಿಸುವುದರ ಮೂಲಕ ಸಿದ್ಧಗೊಳಿಸಬೇಕು ಹಾಗೂ ಕಾರ್ಯವಿಧಾನದ ಬಗ್ಗೆ ಮಾನಸಿಕವಾಗಿ ಚೆನ್ನಾಗಿ ತಯಾರಿಗೊಳಿಸಬೇಕು. ಪ್ರಕರಣದ ಪ್ರತಿ ಹೇಳಿಕೆಯ ನಂತರ ನ್ಯಾಯಾಲಯದ ಆದೇಶದ ಬಗ್ಗೆ ಮಗುವಿಗೆ ತಿಳಿಸಿರಬೇಕು. ಹಾಗಾಗಿ ಆ ಮಗುವಿಗೆ ತನ್ನ ಪ್ರಕರಣ (ಕೇಸ್)ದ ಬಗ್ಗೆ ಇತ್ತೀಚಿನ ಮಾಹಿತಿಯು ತಿಳಿದಂತಾಗುತ್ತದೆ.
- ಮಗು ಭೀಕರ ಸಂದರ್ಭ ಮತ್ತು ನೋವನ್ನು ಅನುಭವಿಸುವುದನ್ನು ಕಡಿಮೆಗೊಳಿಸಲು ಶೀಘ್ರ ವಿಚಾರಣೆ (Speedy Trail) ಮುಖಾಂತರ ಸಾಗಾಣಿಕೆ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಶಿಫಾರಸ್ಸು ಮಾಡಲಾಗಿದೆ.

<u>ಈ) ಪುನರ್ವಸತಿ ಕಲ್ಪಿಸಲು ಕಾರ್ಯತಂತ್ರ</u>: (ಮಕ್ಕಳ ರಕ್ಷಣಾಗೃಹ/ಮಕ್ಕಳ ಮಂದಿರಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ)

i. ಮಗುವನ್ನು ಅನೌಪಚಾರಿಕವಾಗಿ ಸ್ವಾಗತಿಸಿ, ಇತರ ನಿವಾಸಿಗಳನ್ನು ಹಾಗೂ ಸುತ್ತಮುತ್ತಲಿನ ಪರಿಸರವನ್ನು ಪರಿಚಯಿಸಿರುವುದನ್ನು ಖಾತ್ರಿಪಡಿಸಿ ಅವಳ/ಅವನ ಕೊಠಡಿಯನ್ನು ಪರಿಚಯಿಸಬೇಕು. ಮಗುವಿನ ಸ್ವಂತ ಸಾಮಾನುಗಳನ್ನು ಇಟ್ಟುಕೊಳ್ಳಲು ಲಾಕರ್‌ನ್ನು ತೋರಿಸಬೇಕು. .ಮೊದಲು ಕೆಲವು ದಿನಗಳು ಮಗು ಏಕಾಂತವಾಗಿರಲು ಅವಕಾಶ ಕಲ್ಪಿಸಬೇಕು. ಸಾಧ್ಯವಾದಲ್ಲಿ ಅವಳನ್ನು ಇತರರಿಂದ ಅಥವಾ ಅವಳಂತೆ ರಕ್ಷಿಸಿದವರಿಂದ ಬೇರ್ಪಡಿಸಿ ಇಡಬೇಕು.

ii. ಮಗು ಆಗಮಿಸಿದಾಗ ಬಟ್ಟೆ, ಟವಲ್, ಒಳ ಉಡುಪುಗಳು, ಚಪ್ಪಲಿಗಳು, ಸೋಪು, ಎಣ್ಣೆ, ಬಾಚಣಿಗೆ, ಹಲ್ಲುಜ್ಜುವ ಬ್ರೆಷ್, ಪೇಸ್ಟ್, ಶಾಂಪೂ, ರಬ್ಬರ್‌ಬ್ಯಾಂಡ್, ಸ್ಯಾನಿಟರಿ ನ್ಯಾಪ್‌ಕಿನ್ ಇತ್ಯಾದಿಗಳನ್ನೊಳಗೊಂಡಂತಹ ಒಂದು ಆಗಮನದ ಕಿಟ್‌ನ್ನು ನೀಡಬೇಕು.

iii. ಮಗು ನೆಲೆಸಿದ ನಂತರ ರಕ್ಷಣಾಗೃಹ/ಮಕ್ಕಳ ಮಂದಿರದ ನಿಯಮಗಳು ಮತ್ತು ಧ್ಯೇಯೋದ್ದೇಶಗಳನ್ನು ತಿಳಿಸಿ. ಹೀಗೆ ಮಾಡುವುದರಿಂದ ಮಗು ಹೊಸ ಪರಿಸರದಲ್ಲಿ ಆರಾಮವಾಗಿರಲು ಹಾಗೂ ಸುಭದ್ರತೆಯ ಭಾವನೆ ತಾಳಲು ಸಹಕರಿಸಿದಂತಾಗುತ್ತದೆ. ಇದರ ಜೊತೆಗೆ ಮಗು ಸದರಿ ಗೃಹದಲ್ಲಿ ಇರುವಷ್ಟು ಸಮಯ ನಿಭಾಯಿಸಬೇಕಾದ ಜವಾಬ್ದಾರಿಗಳನ್ನು ಹಾಗೂ ಕರ್ತವ್ಯಗಳನ್ನು ಸಹ ವಿವರಿಸಿ ತಿಳಿಸಿ.

iv. ನೋಂದಾಯಿತ ವೈದ್ಯರು ಮಗುವಿಗೆ ಯಾವುದಾದರೂ ಖಾಯಿಲೆ, ಅಲರ್ಜಿಗಳು, ಚರ್ಮದ ಮೇಲೆ ರ್‍ಯಾಷಸ್, ಮಾನಸಿಕ ಅಸ್ವಸ್ಥತೆ ಅಥವಾ ಇನ್ಯಾವುದಾದರು ಸಮಸ್ಯೆಗಳಿವೆಯೇ ಎಂದು ಪರೀಕ್ಷಿಸಬೇಕು. ರಕ್ತ ಪರೀಕ್ಷೆ, ಶ್ವಾಸಕೋಶ, ಎಕ್ಸ್-ರೇ, ಸ್ಟೂಲ್ ಪರೀಕ್ಷೆ ಮಾಡಿಸಬೇಕು. ಒಂದು ವೇಳೆ ಮಗು ಯಾವುದಾರೂ ಖಾಯಿಲೆಯಿಂದ ಬಳಲುತ್ತಿದ್ದ ಪಕ್ಷದಲ್ಲಿ, ವೈದ್ಯರು ತಿಳಿಸಿದ ಚಿಕಿತ್ಸೆಯನ್ನು ನೀಡಬೇಕು ಹಾಗೂ ಮಗುವಿನ ಆರೋಗ್ಯದ ಸ್ಥಿತಿಯ ಬಗ್ಗೆ ನಿರಂತರವಾಗಿ ಅನುಸರಣೆ ಮಾಡಬೇಕು.

v. ಮಗುವಿನ ಜೊತೆ ಮಾತನಾಡಿ ಮಗು ಶಿಕ್ಷಣವನ್ನು ಮುಂದುವರೆಸಲು ಆಸಕ್ತಿ ಇದೆಯೇ ಎಂದು ತಿಳಿಯಿರಿ. ಅದರಂತೆ ಮಗುವನ್ನು ಶಾಲೆಗೆ ದಾಖಲಿಸಿ ಅಥವಾ ಅನೌಪಚಾರಿಕ ಶಿಕ್ಷಣ ಅಥವಾ ಮನೆ ಪಾಠದ ವ್ಯವಸ್ಥೆಯನ್ನು ಕಲ್ಪಿಸಿ ಮಗುವು ಇತರರಂತೆ ತನ್ನ ತರಗತಿಯ ಶಿಕ್ಷಣವನ್ನು ಪಡೆಯಲು ಅನುವಾಗಲು ಸಹಕರಿಸಿ. ಏನೇ ಆದರೂ ಮಗುವು ಸದರಿ ಗೃಹ ಬಿಡುವ ಸಮಯದೊಳಗೆ ಸ್ವತಂತ್ರ್ಯವಾಗಿ ಜೀವಿಸಲು ಸಹಕಾರಿಯಾಗುವಂತೆ ಮೂಲ ಶಿಕ್ಷಣವನ್ನು ನೀಡಬೇಕು.

vi. ಮಗುವಿಗೆ ನಿರಂತರವಾಗಿರುವ ಹಾಗೂ ಪ್ರಾಯೋಗಿಕವಾದ ವೃತ್ತಿಪರ ತರಬೇತಿ, ಮಾರುಕಟ್ಟೆ ಮಾಡುವ ವಿಧಾನಗಳನ್ನು ನೀಡಿ, ಹೀಗೆ ತರಬೇತಿ ಹಾಗೂ ಮಾರುಕಟ್ಟೆ ಮಾಡುವ ಕಾರ್ಯತಂತ್ರಗಳನ್ನು ನೀಡುವಾಗ ಅವು ಮಗುವಿನ ಹಕ್ಕುಗಳಿಗೆ ಹಾಗೂ ಕಾರ್ಮಿಕ ಕಾನೂನುಗಳಿಗೆ ವಿರುದ್ಧವಿರದಂತೆ ಎಚ್ಚರ ವಹಿಸಬೇಕು.

vii. ಮಗುವನ್ನು ಅದರ ಕುಟುಂಬದ ಜೊತೆ ವಿಲೀನಗೊಳಿಸಲು ತಯಾರು ಮಾಡಿ, ರಕ್ಷಿಸಿದ ಮಗು ಮತ್ತೆ ಸಾಗಾಣಿಕೆಗೆ ಹಾಗೂ ಶೋಷಣೆಗೆ ಒಳಗಾಗುವುದನ್ನು ತಪ್ಪಿಸುವ ಸಲುವಾಗಿ, ಸಾಮಾಜಿಕ ಒಪ್ಪಿಗೆ ಇಲ್ಲದೆ ಹಾಗೂ ಕುಟುಂಬದ ಬೆಂಬಲ (Support) ಇಲ್ಲದೆ ಮಗುವನ್ನು ಕುಟುಂಬಕ್ಕೆ ಹಿಂತಿರುಗಿಸಬಾರದು.

& & &